# ತತ್ತ್ವ ಹೇಳುವುದಕ್ಕಲ್ಲ ಬದುಕುವುದಕ್ಕೆ

❑ ಕೆ.ಬಿ. ಪ್ರಭುಪ್ರಸಾದ್

ಝೆನ್ ಕೇವಲ ಸಿದ್ಧಾಂತದ ಕಂತೆಯಲ್ಲ, ಅನುಷ್ಠಾನದ ಮಂತ್ರ. ಬದುಕನ್ನು ಒಂದು ದೊಡ್ಡ ವಿಸ್ಮಯದಂತೆ ನೋಡಿ ಸಾಮಾನ್ಯ ವಿಚಾರಗಳಲ್ಲಿ ಅಸಾಮಾನ್ಯ ಅನುಭವವನ್ನು ಹುಡುಕುವುದೇ ಝೆನ್‌ನ ನಿಲುವು. ಈ ವಿಧಾನದಲ್ಲಿ ರೋಚಕ ಪ್ರಸಂಗಗಳ, ಕಥೆಗಳ ಪಾಲು ಬಹು ಪ್ರಮುಖವಾದದ್ದು. ಅಂತಹವುಗಳಲ್ಲಿ ಕೆಲವನ್ನು ಸಂಗ್ರಹಿಸಿ ಅದರ ಹಿಂದಿರುವ ತತ್ತ್ವವನ್ನು ವಿವರಿಸಿರುವ ಶ್ರೀ ಪ್ರಭುಪ್ರಸಾದ್ ಅವರು ಕನ್ನಡದ ಹೆಸರಾಂತ ಲೇಖಕರು ಮತ್ತು ರಾಮಕೃಷ್ಣ ಆಶ್ರಮದ ಭಕ್ತರು.

ಒಂದೂರು. ಗಾಳಿ ಜೋರಾಗಿ ಬೀಸುತ್ತಿದ್ದ ದಿನ. ಬೌದ್ಧ ಸ್ತೂಪವೊಂದರ ಮುಂದೆ ಕಂಬದ ಮೇಲ್ತುದಿಯಲ್ಲಿ ಕಟ್ಟಿದ್ದ ಧ್ವಜವು ಪಟ ಪಟ ಎಂದು ಬಡಿದುಕೊಳ್ಳುತ್ತಿತ್ತು. ಅದನ್ನು ನೋಡಿದ ಇಬ್ಬರು ಭಿಕ್ಷುಗಳಲ್ಲಿ ವಾದ ವಿವಾದ ಶುರು ಆಯಿತು. ಒಬ್ಬ ಹೇಳಿದ: " ಧ್ವಜ ಚಲಿಸುತ್ತಿದೆ." ಇನ್ನೊಬ್ಬ ಪ್ರತಿವಾದಿಸಿದ: "ಧ್ವಜ ಅಲ್ಲ, ಚಲಿಸುತ್ತಿರುವುದು ಗಾಳಿ!" "ಇಲ್ಲ, ಧ್ವಜ." "ಅಲ್ಲ, ಗಾಳಿ", "ಧ್ವಜ" "ಗಾಳಿ" ಹೀಗೆ ಜಗಳ ಕೊನೆ ಮುಟ್ಟಲಿಲ್ಲ. ಅಷ್ಟರಲ್ಲಿ ಅಲ್ಲಿಗೆ ಹಿರಿಯ ಭಿಕ್ಷುವೊಬ್ಬ ಬಂದ. ಜಗಳವಾಡುತ್ತಿದ್ದವರು ಅವನಿಗೆ ತಮ್ಮ ವಾದದ ವಿಷಯ ತಿಳಿಸಿ, "ಯಾವುದು ಸರಿ?" ಎಂದು ಕೇಳಿದರು. ಆತ ಶಾಂತ ಮುಖಭಾವದಿಂದ ಹೇಳಿದ: "ಚಲಿಸುತ್ತಿರುವುದು ಧ್ವಜವೂ ಅಲ್ಲ, ಗಾಳಿಯೂ ಅಲ್ಲ. ನಿಮ್ಮ ಮನಸ್ಸು—ಚಲಿಸುತ್ತಿರುವುದು ನಿಮ್ಮ ಮನಸ್ಸು!"

ಇದೊಂದು ಝೆನ್ ಕತೆ. ಸಾಧಾರಣ, ಸರ್ವೇ ಸಾಮಾನ್ಯ ವಿಚಾರಗಳನ್ನು ಭಿನ್ನವಾದ ರೀತಿಯಿಂದ ನೋಡುವುದು ಜೆನ್ ದೃಷ್ಟಿಯ ವೈಶಿಷ್ಟ್ಯ. ಕೇಳಿದ ತಕ್ಷಣ ವಿಸ್ಮಯವುಂಟಾಗುತ್ತದೆ. ವಿಸ್ಮಿತವಾದ ಮನಸ್ಸನ್ನು ಮತ್ತೆ ಆಲೋಚನೆಗೆ ತೊಡಗಿಸುತ್ತದೆ. ಯೋಚಿಸುತ್ತ ವಿಚಾರ ಮಾಡುತ್ತ ಸತ್ಯದ ಹೊಳಹು ಫಕ್ಕನೆ ಅನುಭವಕ್ಕೆ ಬರುತ್ತದೆ. ಝೆನ್ ಧರ್ಮ ಎಂಬುದು ಜಪಾನಿನಲ್ಲಿ ಪ್ರಚಲಿತವಾದ ಬೌದ್ಧಧರ್ಮದ ಒಂದು ಶಾಖೆ. ಧ್ಯಾನ ಎಂಬ ಶಬ್ದವು ಜಪಾನ್ ಉಚ್ಚಾರಣೆಯಲ್ಲಿ ಝೆನ್ ಆಗಿರಬಹುದು. ಇದರ ಸಿದ್ಧಾಂತ ಕೇವಲ ತಾತ್ತ್ವಿಕವಾದುದಲ್ಲ. ಬುದ್ಧಿಯ ಚುರುಕು, ತರ್ಕದ ಚಮತ್ಕಾರ, ಅತ್ಯಂತ ಸೂಕ್ಷ್ಮವಾದ ತತ್ತ್ವ ವಿಶ್ಲೇಷಣೆ, ಶೂನ್ಯವಾದದಲ್ಲಿ ಉತ್ಕಟ ನಿಷ್ಠೆ, ಚಿಂತೆಯಲ್ಲ ಚಿಂತನೆ ಮುಖ್ಯ ಎಂಬ ನಿಲುವು—ಇವೆಲ್ಲ ಝೆನ್ ವಿಚಾರಧಾರೆಯ ವೈಶಿಷ್ಟ್ಯಗಳಾದರೂ, ತತ್ತ್ವ ಇರುವುದು ಹೇಳುವುದಕ್ಕಲ್ಲ, ಬದುಕುವುದಕ್ಕೆ ಎಂಬ ಪ್ರಾಯೋಗಿಕ (ಅಂದರೆ ಅನುಷ್ಠಾನ ಪ್ರಧಾನವಾದ) ಮನೋಧರ್ಮ ಅದರ ಬಹು ಮುಖ್ಯವಾದ ಲಕ್ಷಣ.

ಮೇಲೆ ಹೇಳಿದ ಕತೆಯಂತಹ ನೂರಾರು ಸೊಗಸಾದ, ಕಿರಿದರಲ್ಲಿ ಹಿರಿದರ್ಥವನ್ನು ಅಡಕಮಾಡಿ ಹೇಳುವ ಚಿಕ್ಕ ಕತೆಗಳನ್ನು ಝೆನ್ ಗುರುಗಳು ತಮ್ಮ ಬೋಧನೆಗಾಗಿ ಕಟ್ಟಿ ಹೇಳಿದ್ದಾರೆ. ಅಂತಹ ಇನ್ನಷ್ಟು ಕತೆಗಳನ್ನು ಪರಿಚಯಿಸಲೆಂದು ಈ ಲೇಖನ. ಬರಿದೆ ಕೇಳಿ ಸಂತೋಷಿಸುವುದಲ್ಲ, ಕತೆಯ ಮಾರ್ಮಿಕ ಅಂತರಾರ್ಥವನ್ನು ಗ್ರಹಿಸುವುದು, ಅದಕ್ಕಾಗಿ ಆಲೋಚನೆಗೆ ತೊಡಗುವುದು ಮುಖ್ಯ. ಕತೆಯಿಂದ ಪ್ರಚೋದಿತವಾದ ಚಿಂತನದಿಂದ ಜೀವನದ ಬಗ್ಗೆ, ಜಗತ್ತಿನ ಬಗ್ಗೆ, ಸ್ವಾತ್ಮದ ಬಗ್ಗೆ ಸರಿಯಾದ ಆರೋಗ್ಯಕರವಾದ ಮನೋಧರ್ಮವನ್ನು ರೂಪಿಸಿಕೊಳ್ಳುವುದು ಇದಕ್ಕಿಂತಲೂ ಮುಖ್ಯ.

ಇನ್ನು ಕೆಲವು ಸ್ವಾರಸ್ಯವಾದ ಜೆನ್ ಕತೆಗಳನ್ನು ಈಗ ಓದಿರಿ, ಅವುಗಳ ಬಗ್ಗೆ ಸ್ವಲ್ಪ ಚಿಂತನೆ ಮಾಡಿರಿ. ಸಾಕು, ಕತೆಯ ಅಂತರಾರ್ಥ ತನಗೆ ತಾನೆ ಹೊಳೆಯುತ್ತದೆ.

ಯಾಮಾವೋಕಾ ಎಂಬ ಹೆಸರಿನ ಒಬ್ಬ ಯುವಕ ಇದ್ದ. ಅವನು ಶುದ್ಧ ಎಳೇ ನಿಂಬೇಕಾಯಿ. ಒಂದು ಸಲ ಅವನು ಆಚಾರ್ಯ ಡೋಕು ಆನ್ ಅವರ ಬಳಿಗೆ ಬಂದು, ತನ್ನ ಜ್ಞಾನ ಪ್ರದರ್ಶನ ಮಾಡುವ ಚಪಲಕ್ಕೆ ಒಳಗಾದ. "ಮನಸ್ಸು ಎಂಬುದಿಲ್ಲ. ದೇಹವೂ ಇಲ್ಲ. ಬುದ್ಧನೂ ಇಲ್ಲ. ಯಾರೂ ಹೆಚ್ಚಲ್ಲ. ಯಾರೂ ಕಡಮೆಯಲ್ಲ. ಯಾರೂ ಗುರು ಅಲ್ಲ. ಯಾರೂ ಶಿಷ್ಯನಲ್ಲ. ಕೊಡುವುದೂ ಇಲ್ಲ. ಪಡೆಯುವುದೂ ಇಲ್ಲ. ನಾವು ನೋಡುವ, ಭಾವಿಸುವ ವಸ್ತುವು ಸತ್ಯವಾದುದಲ್ಲ. ಸತ್ಯವಾಗಿ ಇರುವುದೊಂದೇ ಒಂದು. ಅದು ಶೂನ್ಯ! ಕಾಣುವ ಈ ಲೋಕವೆಲ್ಲ ಮತ್ತು ಈ ವಸ್ತುಗಳೆಲ್ಲ ನಿಜದಲ್ಲಿ ಇಲ್ಲವೆ ಇಲ್ಲ." ಹೀಗೆ ಹೇಳುತ್ತ ಯಾಮಾವೋಕಾ, ಝೆನ್‌ತತ್ತ್ವವನ್ನು ಅದ್ಭುತವಾಗಿ ಭಟ್ಟಿಯಿಳಿಸಿ ಈ ಕೆಲವೇ ಮಾತುಗಳಲ್ಲಿ ಸಾರಸರ್ವಸ್ವವನ್ನೇ ಅಡಕಮಾಡಿ ಹೇಳಿದ್ದೇನೆಂದು ತನ್ನ ಪ್ರತಿಭೆಗೆ ತಾನೆ ಸೋಜಿಗಪಡುತ್ತ ಬೇಗಿ ಆಚಾರ್ಯರ ಕಡೆ ನೋಡಿದ. ಖಂಡಿತವಾಗಿ ಅವರು ತಲೆದೂಗಿ ತನ್ನನ್ನು ಪ್ರಶಂಸಿಸಲು ಶಬ್ದಗಳನ್ನು ಹುಡುಕುತ್ತಿರಬಹುದೆಂದು ಭಾವಿಸಿದ.

ಆಚಾರ್ಯ ಡೋಕು ಆನ್ ಸುಮ್ಮನೆ ಗುಡಿಗುಡಿ ಸೇದುತ್ತ ಇದೆಲ್ಲವನ್ನು ಕೇಳುತ್ತಿದ್ದರು. ಕೇಳುವುದು ಮುಗಿದಾಗ ಅವರ ಮುಖದ ಮೇಲೆ ಒಂದು ಕಿರುನಗೆ ಮಿಂಚಿ ಮಾಯವಾಯಿತು. ಯಾಮಾವೋಕಾ ಬಂದಾಗಿನಿಂದ ಆಚಾರ್ಯ ಒಂದು ಮಾತನ್ನೂ ಆಡಿರಲಿಲ್ಲ. ಕೇಳಿದ್ದೆಲ್ಲ ಆದಮೇಲೆ ಒಂದು ಮರುಮಾತನ್ನೂ ಆಡದೆ ಒಂದು ಕೋಲನ್ನೆತ್ತಿಕೊಂಡು ಯಾಮಾವೋಕಾನ ಬೆನ್ನಿನ ಮೇಲೊಮ್ಮೆ ಬಾರಿಸಿದರು. ಅದೂ ತೀರಾ ಅನಿರೀಕ್ಷಿತವಾಗಿ! ಪೆಟ್ಟು ತಿಂದ ಆ ಯುವಕ ಕೆರಳಿ ನೆಗೆದು ನಿಂತ. ಆತನ ಮುಖದ ಮೇಲೆ ಕೋಪ ಕೆಂಡಾಮಂಡಲವಾಗಿ ವ್ಯಕ್ತವಾಗಿತ್ತು.

ಡೋಕು ಆನ್ ಹೇಳಿದರು : "ನೀ ಹೇಳುವಂತೆ ಯಾವ ವಸ್ತುವೂ ನಿಜದಲ್ಲಿ ಇಲ್ಲವೇ ಇಲ್ಲ, ಎಲ್ಲವೂ ಶೂನ್ಯ. ಹೀಗಿರುವಾಗ ನಿನ್ನ ಕೋಪ ಬಂದುದು ಎಲ್ಲಿಂದ? ಅದನ್ನು ಆಲೋಚಿಸು."

**ಇನ್ನೊಂದು ಕತೆ**: ಬ್ಯಾಂಕೆ ಎಂಬ ಒಬ್ಬ ಗುರು ತನ್ನಷ್ಟಕ್ಕೆ ತಾನು ಶಿಷ್ಯರಿಗೆ ಉಪದೇಶ ಮಾಡುತ್ತ ಎಲೆಮರೆಯ ಕಾಯಿಯಂತೆ ಬಾಳನ್ನು ನಡೆಸುತ್ತಿದ್ದರು. ಒಮ್ಮೆ ಶಿಂಷು ಎಂಬ ಪೂಜಾರಿಯೊಬ್ಬ ಬಂದು ಮಧ್ಯೆ ತಲೆಹಾಕಿದ. ಆತನಿಗೆ ಪವಾಡಗಳಲ್ಲಿ, ಅತೀಂದ್ರಿಯ ಶಕ್ತಿಗಳಲ್ಲಿ ನಂಬಿಕೆ. ಸಾಧಕರು ಸಾಧನೆಯಿಂದ ಪಡೆದ ಅಪೂರ್ವ ಸಿದ್ಧಿಗಳ ಬಗ್ಗೆ ಅಪಾರ ಗೌರವ. ಗುರುವಿನ ಪ್ರವಚನದ ಮಧ್ಯೆ ತಡೆ ಹಾಕಿದಂತೆ ಮಾತಾಡತೊಡಗಿದ. ಮಂತ್ರಜಪದಿಂದ ಸಿದ್ಧಿಯನ್ನು ಪಡೆದರೆ ಏನು ಬೇಕಾದರೂ ಮಾಡಬಹುದು, ತೀವ್ರವಾದ ಕಾಯಿಲೆಯನ್ನು ಸಹ ಗುಣಪಡಿಸಬಹುದು, ಆಕಾಶದಲ್ಲಿ ಚರಿಸಬಹುದು, ಇಚ್ಛಿಸಿದ ವಸ್ತುಗಳನ್ನೆಲ್ಲ ತರಿಸಿ ಪ್ರತ್ಯಕ್ಷವಾಗಿ ಕಾಣುವಂತೆ ಮಾಡಿಕೊಡಬಹುದು—ಇತ್ಯಾದಿ. ಬ್ಯಾಂಕೆ ತಮ್ಮ ಪ್ರವಚನವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಶಿಂಷು ಪೂಜಾರಿ ಏನು ಹೇಳಬೇಕೆಂದಿದ್ದಾನೆಂದು ಕೇಳಿದ. ಪೂಜಾರಿ ಜಂಭ ಕೊಚ್ಚಿಕೊಳ್ಳತೊಡಗಿದ : "ನಮ್ಮ ಧರ್ಮದ ಮೂಲ ಗುರುಗಳು ಪ್ರಚಂಡ ಮಹಿಮಾಶಾಲಿಗಳು. ಅಸಾಧಾರಣ ವೆನ್ನುವಂಥ ಕಾರ್ಯಗಳನ್ನು ಲೀಲಾಜಾಲವಾಗಿ ಮಾಡಬಲ್ಲವರಾಗಿದ್ದರು. ಅವರು ಲೇಖನಿ ಹಿಡಿದು ನದಿಯ ಒಂದು ತೀರದ ಮೇಲೆ ನಿಂತರೆ, ಶಿಷ್ಯ ಫಲಕ ಹಿಡಿದು ಇನ್ನೊಂದು ತೀರದಲ್ಲಿ ನಿಲ್ಲುತ್ತಿದ್ದ. ಆದರೇನು ಗುರು ಅಲ್ಲಿಂದಲೆ ಬರೆಯುವಂತೆ ಲೇಖನಿಯನ್ನು ಆಡಿಸಿದರೆ ಇನ್ನೊಂದು ತೀರದ ಮೇಲಿದ್ದ ಶಿಷ್ಯನ ಫಲಕದ ಮೇಲೆ ಅಕ್ಷರಗಳು ಮೂಡುತ್ತಿದ್ದುವು. 'ಅಮಿದಾ' ಎಂಬ ಪುಣ್ಯ ನಾಮ ಸಹ ತನಗೆ ತಾನೆ ಮೂಡುತ್ತಿತ್ತು. ಇಂತಹ ಪವಾಡವನ್ನು ನೀವು ಮಾಡಬಲ್ಲಿರಾ? "

" ಇಲ್ಲ," ಎಂದರು ಬ್ಯಾಂಕೆ ತಕ್ಷಣ.

"ಹಾಗಾದರೆ ಬೇರೆ ಏನು ಮಾಡಬಲ್ಲಿರಿ?"

"ನಾನೆಲ್ಲೊ ಕೆಲವು ಚಿಕ್ಕ ಪುಟ್ಟ ಪವಾಡಗಳನ್ನು ಮಾತ್ರ ಮಾಡಬಲ್ಲೆ. ಉದಾಹರಣೆಗೆ: ಹಸಿವಾದಾಗ ಊಟ ಮಾಡುತ್ತೇನೆ. ಬಾಯಾರಿಕೆಯಾದಾಗ ನೀರು ಕುಡಿಯುತ್ತೇನೆ. ನನ್ನನ್ನು ನಿಂದಿಸಿ ಅಪಮಾನಪಡಿಸಿದವರನ್ನು ಕ್ಷಮಿಸಿಬಿಡುತ್ತೇನೆ."

**ಮತ್ತೊಂದು ಕತೆ**: ಝೆನ್ ಗುರುಗಳ ಬಳಿ ಒಬ್ಬ ಬಂದು, "ಗುರುಗಳೆ ನನಗೆ ಕೋಪ ಜಾಸ್ತಿ. ಅದನ್ನು ಬಿಡುವ ಉಪಾಯ ವೇನು? ದಯವಿಟ್ಟು ನನಗದನ್ನು ಹೇಳಿಕೊಡಿ," ಎಂದು ಬೇಡಿಕೊಂಡ. ಗುರುಗಳು, "ಓ, ಹಾಗಾ? ಎಲ್ಲಿ ನೋಡೋಣ ನಿಮ್ಮ ಕೋಪ ಹೇಗಿರುತ್ತೆ ಅಂತ ಸ್ವಲ್ಪ ತೋರಿಸಿರಿ," ಎಂದರು. ಆತ ಗುರುಗಳ ಶಾಂತವಾದ ಮುಖಮುದ್ರೆಯನ್ನು ನೋಡಿದ. ಅವನ ಮನಸ್ಸೂ ಶಾಂತವಾಗಿತ್ತು. ಹೀಗಿರುವಾಗ ಕೋಪವನ್ನು ಹೇಗೆ ತಾನೆ ತೋರಿಸುವುದಕ್ಕಾಗುತ್ತೆ ಎಂದುಕೊಂಡ. "ಹಾಗೆಲ್ಲ ತೋರಿಸಲು ಆಗುವುದಿಲ್ಲ ಗುರುಗಳೆ. ಅದು ಯಾವಾಗಲೊ ತನಗೆ ತಾನೆ ಬಂದುಬಿಡುತ್ತೆ. ಕೇಳಿದಾಗ ಬರುವುದಿಲ್ಲ" ಎಂದ. ಗುರುಗಳು, "ಹಾಗಿದ್ದರೆ ಕೋಪ ನಿನ್ನ ಸ್ವಭಾವವಲ್ಲ. ಸ್ವಾಭಾವಿಕವಾದುದನ್ನು ಬಿಡುವುದು ಕಷ್ಟ. ಸ್ವಾಭಾವಿಕವಲ್ಲದ ಕೋಪವನ್ನು ಬಿಡುವ ಮಾತೆಲ್ಲಿ ಬಂತು. ಅದಕ್ಕೇಕೆ ಚಿಂತೆ!"ಎಂದರು.

ಕೊನೆಯದಾಗಿ (ಅಂದರೆ ಸದ್ಯಕ್ಕೆ —ಈ ಸಲಕ್ಕೆ) ಇನ್ನೂ ಒಂದು ಕತೆ : ಆಚಾರ್ಯ ರ್‍ಯೋ ಕಾನ್‌ನದು ಒಂದು ಬಡ ಗುಡಿಸಲು, ಗಿರಿಯ ತಪ್ಪಲಲ್ಲಿ. ಒಂದು ರಾತ್ರಿ ಬೆಳದಿಂಗಳು ಚೆನ್ನಾಗಿ ಬಿದ್ದಿತ್ತು. ಹೊರಗಡೆ ಸುತ್ತಾಡಿ ಮನೆಗೆ ಬಂದಾಗ ಒಬ್ಬ ಕಳ್ಳ ಒಳಗೆ ಸೇರಿಕೊಂಡಿದ್ದ. ಬಾಗಿಲು ತೆರೆದೇ ಇತ್ತಲ್ಲ! ಆತ ಕದಿಯಲು ಏನಾದರೂ ಸಿಕ್ಕೀತೆ ಎಂದು ಹುಡುಕುತ್ತಿದ್ದುದು ಕಂಡಿತು. ಪಾಪ! ರ್‍ಯೋ ಕಾನ್ ದಟ್ಟ ದರಿದ್ರ, ಮೇಲಾಗಿ ಯತಿ. ಮನೆಯಲ್ಲಿ ಏನು ತಾನೆ ಇದ್ದೀತು! ಇಷ್ಟು ಕಷ್ಟ ಪಟ್ಟು, ಕಾಡು-ಮೇಡು ದಾಟಿ, ಬೆಟ್ಟ ಹತ್ತಿ ಬಂದ ಈತ ಬರಿಗೈಯಲ್ಲಿ ಹೋಗಬೇಕಾಯಿತೇ, ಪಾಪ! ಎಂದು ಕನಿಕರಿಸಿದ ರ್‍ಯೋ ಕಾನ್ ತಾವು ಉಟ್ಟಿದ್ದ ಬಟ್ಟೆ ಸಹಿತವಾಗಿ ತನ್ನ ಇನ್ನೊಂದು ಜೊತೆ ಬಟ್ಟೆಯನ್ನು ಆತನಿಗೆ ಕೊಟ್ಟುಬಿಟ್ಟರು. ಅವನಲ್ಲಿದ್ದುದೇ ಅಷ್ಟು. ಕಳ್ಳ ಹಿಂದೆ ಮುಂದೆ ನೋಡದೆ ಆ ಬಟ್ಟೆಗಳನ್ನೆಲ್ಲ ಗಂಟು ಕಟ್ಟಿ ಹೊತ್ತುಕೊಂಡು ಹೊರಟುಹೋದಮೇಲೆ ರ್‍ಯೋ ಕಾನ್ ತಾನು ಬೆತ್ತಲೆಯಾಗಿರುವಾಗ ಬೆಳದಿಂಗಳು ಇರುವುದನ್ನು ನೋಡಿ, " ಈ ಅದ್ಭುತವಾದ ಬೆಳದಿಂಗಳನ್ನೂ ಆ ಕಳ್ಳನಿಗೆ ಕೊಡಲು ಬರುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಎಂದುಕೊಂಡರು.

## ನಿರಂತರ ಅರಿವು

ಟೆನ್ನೋ ಎಂಬ ಒಬ್ಬ ಝೆನ್ ಶಿಷ್ಯನು ಗುರುವಿನಿಂದ ಹತ್ತು ವರ್ಷ ತರಬೇತಿ ಪಡೆದಮೇಲೆ ತಾನೇ ಗುರುವಾಗಿ ಉಪದೇಶ ನೀಡಲಾರಂಭಿಸಿದನು. ಅನೇಕ ವರ್ಷಗಳು ಕಳೆದವು. ಒಮ್ಮೆ ಟೆನ್ನೋಗೆ ತನ್ನ ಗುರುವನ್ನು ನೋಡಬೇಕೆಂಬ ಆಸೆಯಾಯಿತು. ಆಗ ವರ್ಷಾಕಾಲ. ಟೆನ್ನೋ ಒಂದು ಕೊಡೆ ಹಿಡಿದುಕೊಂಡು ಮರದ ಪಾದರಕ್ಷೆ ಹಾಕಿಕೊಂಡು ಗುರುವನ್ನು ಕಾಣಲು ಹೊರಟನು.

ಗುರುವಿನ ಕುಟೀರದ ಮುಂದೆ ಪಾದರಕ್ಷೆಯನ್ನೂ ಕೊಡೆಯನ್ನೂ ಇಟ್ಟು ಒಳಗೆ ಪ್ರವೇಶಿಸಿದನು. ಗುರು ಅವನನ್ನು ಬರಮಾಡಿಕೊಂಡು ಕೇಳಿದ ಮೊದಲ ಪ್ರಶ್ನೆಯೇ " ನೀನು ನಿನ್ನ ಕೊಡೆ ಮತ್ತು ಪಾದರಕ್ಷೆಯನ್ನು ಹೊರಗೆ ಇಟ್ಟು ಬಂದಿದ್ದೀಯಲ್ಲ, ಕೊಡೆಯನ್ನು ಪಾದರಕ್ಷೆಯ ಬಲಭಾಗದಲ್ಲಿ ಇಟ್ಟಿದ್ದೀಯಾ ಅಥವಾ ಎಡಭಾಗದಲ್ಲೋ ಹೇಳು. "

ಟೆನ್ನೋ ತಬ್ಬಿಬ್ಬಾದನು. ಅವನಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಅವನು ಯಾಂತ್ರಿಕವಾಗಿ, ಆತ್ಮಪ್ರಜ್ಞೆಯಿಲ್ಲದೆ ಒಳಗೆ ಪ್ರವೇಶಿಸಿದ್ದನು. ನಿರಂತರ ಅರಿವನ್ನು ಪಡೆಯಲು ಇನ್ನೂ ಹತ್ತು ವರ್ಷ ತರಬೇತಿ ಪಡೆಯಬೇಕೆಂದು ಗುರು ಅವನಿಗೆ ಹೇಳಿದರು.